SRI VEERANNA.—There are no liaison officers of these companies in Bangalore, Only the M. P. M. and VISL havegot the Guest Houses. In addition to this, Karnataka Fisheries Development Corporation and K. S. I. C. have got the guest houses. So only 7 Companies have got guest houses. The expenditure incurred is only on telephone bills, water charges and maintenance of staff and meeting the rent of these guest houses.

SRI J. A. FERNANDES.—Guest houses is one aspect and the other aspect is about Liaison officers. I am more concerned with the liaison officers in Bangalore. Is it a necessity for state Government undertakings ? Is there any need for it ?

SRI VEERANNA.—Their presence is really requiredin Bangalore to co-ordinate the business between the companies they represent and other individuals or companies. Their presence is essential.

SRI J. A. FERNANDES.—Is it a necessity to have liaison officers of the State Undertakings and officers in Bangalore. It is totally unjustified because it is the state Government employees who are heading these companies. There is also aBureau of Pablic Enterprises in Bangalore. If you remove these things you can avoid wasteful expenditure. I submit sir, the expenditure incurred on liaison officers of these companies situated outside Bangalore is Rs. 28.48 lakhs. Lot of monies can be saved if these officers and Guest Houses are closed. Is there any reason to have these establishments in Bangalore ? I request the Government for their closure.

SRI VEERANNA.—The Government will keep the suggestions made by the hon. Member in mind.

ಕರ್ನಾಟಕ ವಿದ್ಯುತ್ ಮಂಡಳಿಗೆ ಬರಬೇಕಾಗಿರುವ ಬಾಕಿ ಹಣ

೧೫೧೦ (೬೫೩) ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕರ್ನಾಟಕದಲ್ಲಿ ಕೆ.ಇ.ಬಿ. ಗೆ ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಹಣವನ್ನು ಬಾಕಿ ರೂಪದಲ್ಲಿ ತುಂಬ ಬೇಕಾಗಿದ್ದ ಕಾರ್ಖಾನೆಗಳ ಹೆಸರು ಹಾಗೂ ಬರಬೇಕಾಗಿದ್ದ ಬಾಕಿ ಎಷ್ಟು ? (ವಿವರ ನೀಡುವುದು) ಬಾಕಿ ವಸೂಲಿಗಾಗಿ ಕೈಗೊಂಡ ಕ್ರಮಗಳೇನು ?

ಆ) ಎಷ್ಟು ವರ್ಷಗಳಿಂದ ಕಾರ್ಖಾನೆಗಳವರು ಬಾಕಿ ಹಣವನ್ನು ಪಾವತಿ ಮಾಡಿಲ್ಲ (ಕಾರ್ಖಾನೆಯ ವಿವರ ನೀಡುವುದು)

ಇ) ಈ ಕಾರ್ಖಾನೆಗಳಿಂದ ಬರಬೇಕಾಗಿದ್ದ ಬಾಕಿ ಹಣಕ್ಕೆ ಶೇಕಡಾವಾರು ಎಷ್ಟು ಬಡ್ಡಿ ಹಣ ವಸೂಲು ಮಾಡಲಾಗುತ್ತದೆ. ಹಾಗೂ ಈ ರೀತಿ ವಸೂಲಾದ ಹಣ ಎಷ್ಟು (ಇದರ ವಿವರ ಒದಗಿಸುವುದು)

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ದಿನಾಂಕ ೩೦-೯-೮೮ರಲ್ಲಿದ್ದಂತೆ ಒಂದು ಲಕ್ಷಕ್ಕೂ ಮೀರಿದ ಬಾಕಿ ಇರುವ ಗ್ರಾಹಕರ ಪಟ್ಟಿ ಹಾಗೂ ಅವರಿಂದ ಬರಬೇಕಾದ ಹಣದನ್ನೊಳಗೊಂಡ ಪಟ್ಟಿಯನ್ನು ಆನುಬಂಧದಲ್ಲಿ ನೀಡಿದೆ. ವಾಯಿದೆ ಅವಧಿಯೊಳಗೆ ಹಣ ತುಂಬದಿದ್ದಲ್ಲಿ ಅಂತಹ ಸ್ಥಾವರಗಳಿಗೆ ವಿದ್ಯುತ್ ನಿಲ್ಲಿಸಲಾಗುತ್ತದೆ. ನಂತರ ಬಾಕಿ ವಸೂಲಿಗೆ ಮಂಡಳಿ ನಿಯಮಾವಳಿಯಂತೆ, ಎ, ಬಿ, ಸಿ ನಮೂನೆ ನೀಡಲಾಗುತ್ತದೆ. ಆದರೆ ನ್ಯಾಯಾಲಯದ ಮುಂದಿರುವ ಪ್ರಕರಣಗಳಲ್ಲಿ ನ್ಯಾಯಾಲಯದ ತೀರ್ಪು ಬರುವವರೆಗೂ ಏನೂ ತೀರ್ಪು ಕ್ರಮ ಕೈಗೊಳ್ಳಲಾಗುವುದಿಲ್ಲ.

ಆ) ಬಾಕಿ ಮೊತ್ತ ಹಲವಾರು ಪ್ರಕರಣಗಳಲ್ಲಿ ಆರಂಭದಲ್ಲೇ ಒಂದು ಲಕ್ಷ ಮೀರಿರುವುದಿಲ್ಲ. ಬಡ್ಡಿ ಬಾಕಿ ಸೇರುತ್ತಾ ಹೋಗಿ ಬೆಳೆಯುತ್ತದೆ. ಆದ್ದರಿಂದ ಎಷ್ಟು ವರ್ಷದಿಂದ ೧ ಲಕ್ಷ ಮೊತ್ತ ಬಾಕಿ ಉಂಟಾಯಿತು ಎನ್ನುವುದನ್ನು ಸಂಗ್ರಹಿಸಿ ತಿಳಿಸಲಾಗುತ್ತದೆ.

ಇ) ಬಾಕಿ ಹಣಕ್ಕೆ ಮಾಹೆಯಾನ ಶೇಕಡ (೨)ರ ಸರಳ ಬಡ್ಡಿ ವಿಧಿಸಲಾಗುತ್ತದೆ. ವಸೂಲಾದ ಬಡ್ಡಿ ವಿವರ ಸಂಗ್ರಹಿಸಲಾಗುತ್ತಿದ್ದು ಇದನ್ನು ನಂತರ ಬದಗಿಸಲಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ. —ಮಾನ್ಯ ಅಧ್ಯಕ್ಷರೇ, ಯಾವ ಬಡವರ ಮನೆಗೆ ಭಾಗ್ಯ ಜ್ಯೋತಿ ಎಂದು ಬೆಳಕು ಕೊಟ್ಟಿರುತ್ತಾರೆ, ಅವರು ವಿದ್ಯುತ್ ಚಾರ್ಜ್‌ನ್ನು ಕೊಟ್ಟಿಲ್ಲವೆಂದು ಅವರ ಮನೆಯ ಫ್ಯೂಸ್ ಕಿತ್ತುಕೊಂಡು ಹೋಗಿರುತ್ತಾರೆ. ಕೆ.ಇ.ಬಿ. ಯವರಿಗೆ ಲಕ್ಷಾಂತರ ಕೋಟ್ಯಾಂತರ ರೂಪಾಯಿಗಳ ಬಾಕಿಯನ್ನು ಕೊಡುವವರಿದ್ದಾರೆ. ಅವರಿಗೆ ಕರೆಂಟ್ ಕೊಡುತ್ತಿದ್ದಾರೆ. ಇಲ್ಲಿ ಇಂತಹವರು ಎಷ್ಟು ಬಾಕಿ ಬರಬೇಕೆಂಬುದನ್ನು ಇಂಗ್ಲೀಷ್‌ನಲ್ಲಿ ಹೇಳಿದ್ದಾರೆ. ಯಾರು ಯಾರಿಂದ ಕೆ.ಇ.ಬಿ. ಗೆ ಎಷ್ಟೆಷ್ಟು ಬಾಕಿ ಬರಬೇಕೆಂಬ ಬಗ್ಗೆ ಅವರುಗಳ ಹೆಸರನ್ನು ಹೇಳಿಲ್ಲ. ದಯವಿಟ್ಟು ಅವರ ಹೆಸರುಗಳನ್ನು ಹೇಳಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗಾಗಲೇ ಪಟ್ಟಿ ಒದಗಿಸಿರುವುದರಿಂದ ಅದನ್ನು ಹೇಳತಕ್ಕ.....

ಶ್ರೀ ಗೋಪಾಲ ಮುಕುಂದ ಕಾನಡೆ.—ಯಾವಾಗಲೂ ಪಟ್ಟಿ ಬಗ್ಗೆ ಹೇಳ್ತೀರಿ. ನಿಮ್ಮ ಪಟ್ಟಿ ಹಾಳಾಗಲಿ,

ಅಧ್ಯಕ್ಷರು.—ಕಾನಡೆಯವರೆ, ಯಾಕ್ರೀ ಇಷ್ಟು ಖಿಟ್ಟಾ ?

ಶ್ರೀ ಎಸ್. ಎಚ್. ಕೌಜಲಗಿ.—ಸಾಧ್ಯವಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಈಗ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ಬಡವರ ಮನೆ ಬಾಕಿ ಇದ್ದರೆ ಕರೆಂಟ್ ಕಿತ್ತು ಹಾಕುತ್ತೀರಿ. ಶ್ರೀಮಂತರ ಮನೆ ಬಾಕಿಗೆ ಜಪ್ತಿ ಮಾಡುತ್ತೀರಿ. ಇಲ್ಲಿ ಏನು ತಪಾಸಣೆ ಮಾಡ್ತೀರಾ ? ಕೋಟಿಗಟ್ಟಲೆ ಕೊಡೇ ಇದ್ದವರ ಪಟ್ಟಿಯನ್ನು ಇಂಗ್ಲೀಷಿನಲ್ಲಿ ಕೊಡುತ್ತೀರಿ.

(ಗೊಂದಲ)

ಅಧ್ಯಕ್ಷರು.—ಕಾನಡೆಯವರೆ, ಕೂಡ್ರಿ ಹೇಳುತ್ತೇನೆ. ಲಕ್ಷ್ಮೀನರಸಿಂಹಯ್ಯನವರೇ, ಎನ್‌ಕ್ಲೋಷರ್ ಕೊಟ್ಟಿದ್ದರೆ ತಪ್ಪೇನಿತ್ತು ನಿಮ್ಮದು ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೊಟ್ಟಿದ್ದೇನೆ.

ಅಧ್ಯಕ್ಷರು.—ಕಾನಡೆಯವರೆ, ಅವರು ಎನ್‌ಕ್ಲೋಷರ್ ಕೊಟ್ಟಿದ್ದಾರೆ ನೋಡಿಕೊಳ್ರಿ,

ಶ್ರೀ ಗೋಪಾಲ ಮುಕುಂದ ಕಾನಡೆ.—ಈಗಲೂ ಅದೇ ಕೆಲಸ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಗದ್ದಲ ಬೇಡ. ಬೆಳಕು ಹರಿದರೆ ನೀವು ಗದ್ದಲ ತೆಗೆಯುತ್ತೀರಿ. ಅವರು ಏನು ಹೇಳುತ್ತಾರೆ ಕೇಳ್ರಿ. ಎನ್‌ಕ್ಲೋಷರ್ ಕೊಟ್ಟಿದ್ದಾರಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಯಾವಾಗ ಕೇಳಿದರೂ ಇವರದು ಇದೇ ಉತ್ತರ. ಪಟ್ಟಿ ಓದಿ ಹೇಳುವುದು.

(ಗೊಂದಲ)

ಶ್ರೀ ಆರ್ ಎನ್. ನಾಯಕ್.—ಕೋಟಿಗಟ್ಟಲೆ ಬಾಕಿ ಇದ್ದವರ ಆಸ್ತಿಪಾಸ್ತಿ ಜಪ್ತಿ ಮಾಡಲಿ. ಈ ಉತ್ತರ ನಮಗೆ ಬೇಡ.

ಶ್ರೀ ಬಿ. ಲಕ್ಕಪ್ಪ.—ಇವರು ಜನ ಸಾಮಾನ್ಯರ ಮನೆ ಹರಾಜು ಹಾಕುತ್ತಾರೆ.

ಅಧ್ಯಕ್ಷರು.—ತಾವು ಕೇಳಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ದಯಮಾಡಿ ಅವರು ಹೇಳುವುದನ್ನು ಕೇಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಏನು ಕೇಳೋದು ?

ಶ್ರೀ ಆರ್ ವೆಂಕಟರಾಮಯ್ಯ.—ನಿನ್ನೆ ಕೂಡ ನಮ್ಮ ಕಾನ್ಸ್ಟಿಟ್ಯುಯೆನ್ಸಿಯಲ್ಲಿ ೧೦ ರೂಪಾಯಿ ಕಟ್ಟಿಲಿಲ್ಲ ಎಂದು ಡಿಸ್‌ಕನೆಕ್ಟ್ ಮಾಡಿದ್ದಾರೆ. ೫೦ ಮನೆಗಳಲ್ಲಿ ಡಿಸ್‌ಕನೆಕ್ಟ್ ಮಾಡಿದ್ದಾರೆ. ಅವರಿಗೇನೂ ಮಾನ ಮರ್ಯಾದೆ ಇಲ್ಲವೆ ? ೧೦ ರೂಪಾಯಿ ಕೊಡುವುದಿಲ್ಲವೇ ಅವರು ? ಅದೇ ಕೋಟ್ಯಾಂತರ ರೂಪಾಯಿ ಬಾಕಿ ಇದ್ದರೆ ಬಿಡುತ್ತೀರಿ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಹಿಂದೆ ಸದನದಲ್ಲಿ ಈ ಇಷ್ಯೂ ಬಂದಿತ್ತು. ಭಾಗ್ಯಜ್ಯೋತಿ ಯೋಜನೆಯಲ್ಲಿ ವಿದ್ಯುಚ್ಛಕ್ತಿ ಕೊಟ್ಟಿದ್ದಂಥ ಮನೆಗಳಿಗೆಲ್ಲಾ ಡಿಸ್‌ಕನೆಕ್ಟ್ ಮಾಡಿದ್ದಾರೆ. ಮುನ್ನೂರು ನಾನೂರು ರೂಪಾಯಿ ಪೆನಾಲ್ಟಿ ಹಾಕಿ ಅರಿಯರ್ಸ್ ಇದೆ ಎಂದು ಎಲ್ಲಾ ಕಡೆ ಡಿಸ್‌ಕನೆಕ್ಟ್ ಮಾಡಿದ್ದಾರೆ. ಇಲ್ಲಿ ಲಕ್ಷಗಟ್ಟಲೆ, ಕೋಟಿಗಟ್ಟಲೆ ಬಾಕಿ ಕೊಡುವವರಿದ್ದಾರೆ. ಅಂತಹವರ ಹೆಸರು ಓದಿ ಹೇಳಿ. ಜನರಿಗೆ ಗೊತ್ತಾಗಲಿ.

ಅಧ್ಯಕ್ಷರು.—ಲಕ್ಷ್ಮೀನರಸಿಂಹಯ್ಯನವರೇ, ಇವರು ಹೇಳುವುದರಲ್ಲಿ ಸತ್ಯಾಂಶ ಇದೆ. ನೀವು ಕೋಟಿಗಟ್ಟಲೆ ಉದ್ದಿಬಿಟ್ಟಿದ್ದೀರಿ. ಆದರೆ ಇಲ್ಲಿ ೧೦ ರೂಪಾಯಿಗೆ ಡಿಸ್‌ಕನೆಕ್ಟ್ ಮಾಡುತ್ತೀರಿ. ಕೊಶ್ಚನ್ ಹಾಕುವ ಉದ್ದೇಶ ಏನೆಂದರೆ ಬಡವರಿಗೆ, ಹೊಟ್ಟೆ ಹೊರೆಯು ಕೊಳ್ಳುವುದಕ್ಕೆ ದುಡ್ಡಿಲ್ಲದವರಿಗೆ ಡಿಸ್‌ಕನೆಕ್ಟ್ ಮಾಡುತ್ತೀರಿ ಎರೆಡೆರಡು ಕೋಟಿ ಮೂರು ಮೂರು ಕೋಟಿ ರೂಪಾಯಿ ಬಾಕಿ ಇದ್ದರೆ, ಅವರಿಗೆ ಉದ್ದಿ ಬಿಡುತ್ತೀರಿ ಎಂದು ಹೇಳುತ್ತಿದ್ದಾರೆ. ನನಗೆ ಕೂಡ ಬಡವರ ಕಷ್ಟ ಗೊತ್ತಿದೆ. ಹಳ್ಳಿಕಡೆ ಡಿಸ್‌ಕನೆಕ್ಟ್ ಮಾಡಿಸುತ್ತೀರಿ. ಎನ್‌ಫೋರ್ಸ್‌ಮೆಂಟ್ ಕೇಳಿದರೆ ನನಗೇ ಕಾಫಿ ಇಲ್ಲ ಎಂದು ಹೇಳುತ್ತಾರೆ. ಕಾಫಿಗಳನ್ನು ಹೆಚ್ಚಿಗೆ ಏತಕ್ಕೆ ಇಟ್ಟಿಲ್ಲ ? ನನಗೇ ಬೇಕು ಅಂದರೆ ಇಲ್ಲ ಈಗ ನಾನು ಎಲ್ಲಾ ಮಂತ್ರಿಗಳಿಗೆ ಹೇಳಿದ್ದೇನೆ. ನಿಮ್ಮ ಪ್ರಶ್ನೆಗೆ ಉತ್ತರ ಕೊಡುವಾಗ ೨೨೪ ಸದಸ್ಯರಿಗೂ ಕಾಫಿ ಕಳುಹಿಸಿ ಕೊಡಬೇಕು ಎಂದು. ಅದರ ಬಗ್ಗೆ ಸರ್ಕ್ಯುಲರ್ ಇಷ್ಯೂ ಮಾಡಿಸಿದ್ದೇನೆ. ಆದರೂ ಎನ್‌ಕ್ಲೋಷರ್ ಒಂದೇ ಇಟ್ಟುಕೊಂಡಿದ್ದೀರಿ. ಈಗ ಅದನ್ನೇ ಓದಿ ಹೇಳಿ ನೋಡೋಣ.

ಶ್ರೀ ಆರ್. ವೆಂಕಟರಾಮಯ್ಯ.—ಜಿ. ಹಜ್. ಪಟೇಲರು ಡಿಸ್‌ಕನೆಕ್ಟ್ ಮಾಡಿಸುವುದಿಲ್ಲ ಎಂದು ಒಪ್ಪಿಕೊಂಡಿದ್ದರು. ಆದರೂ ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಉದ್ದೇಶ ಏನು ಎಂದು ಹೇಳಿದ್ದೇನೆ. ಅವರು ತಿಳಿದುಕೊಂಡಿದ್ದಾರೆ. ದೊಡ್ಡ ದೊಡ್ಡವರ ಹೆಸರು ಹೇಳಿ ಲಕ್ಷ್ಮೀನರಸಿಂಹಯ್ಯನವರೇ ಹಿಂದೆ ನಾನು ಕೊಶ್ಚನ್ ಹಾಕಿದ್ದಾಗ ಫೋರ್ಪರ್ಸನ್‌ಯವರದ್ದು ಎರಡು ಕೋಟಿ ರೂಪಾಯಿ ಬಿಟ್ಟಿದ್ದರು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಡಿವಿಷನ್‌ವೈಸ್ ಎಷ್ಟೆಷ್ಟು ಬಾಕಿ ಇದೆ ಎಂಬ ಬಗ್ಗೆ ಪಟ್ಟಿಯನ್ನು ಸಂಬಂಧಪಟ್ಟವರಿಗೆ ಇದಗಿಸಿದ್ದೇನೆ. ಪ್ರಶ್ನೆ ಕೇಳಿರುವವರಿಗೆ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅಧ್ಯಕ್ಷರೆ, ತಾವು ಹೇಳಿರುವಹಾಗೆ ಉತ್ತರದ ಕಾಪಿಯನ್ನು ಸದನದ ಎಲ್ಲ ಸದಸ್ಯರಿಗೂ ಕೊಡಬೇಕು.

ಅಧ್ಯಕ್ಷರು.—ಎಲ್ಲರಿಗೂ ಕೊಡಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ತಮ್ಮ ಸರ್ಕ್ಯುಲರನ್ನೇ ಇವರು ಉಲ್ಲಂಘನೆ ಮಾಡುತ್ತಿದ್ದಾರೆ. ತಾವು ಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.—ಉತ್ತರ ಎಲ್ಲರಿಗೂ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಆಸಕ್ತಿ ತೋರಿಸಿದ್ದಾರೆ. ಮಂಡಲಿಯ ನಿಯಮಗಳನ್ನು ಬದಲಾಯಿಸತಕ್ಕ ಅವಶ್ಯಕತೆ ಇದ್ದರೆ ಅದನ್ನೂ ಬೇಕಾದರೆ ಬದಲಾಯಿಸುತ್ತೇವೆ. ಯಾರಿಗೆ ಡಿಸ್‌ಕನೆಕ್ಟ್ ಮಾಡಬೇಕು. ಯಾರದ್ದನ್ನು ಡಿಸ್‌ಕನೆಕ್ಟ್ ಮಾಡಬಾರದು ಎನ್ನತಕ್ಕಂತಹದ್ದಿಲ್ಲ. ಬಳಿಕೆದಾರರು ಅಂದರೆ ಎಲ್ಲರಿಗೂ ಒಂದೇ ನೀತಿ ಅನ್ವಯವಾಗುತ್ತದೆ. ಯಾರ್ಯಾರು ಬಾಕಿ ಉಳಿಸಿಕೊಂಡಿರುತ್ತಾರೆ, ಅವರೆಲ್ಲದ್ದನ್ನು ಡಿಸ್‌ಕನೆಕ್ಟ್ ಮಾಡತಕ್ಕ ವ್ಯವಸ್ಥೆ ಇದೆ. ಕೆಲವು ಕೆಡೆ ಆಡಿಟ್ ಸೆಲ್ ನೋಡಿದಾಗ ಡಿಸ್‌ಕನೆಕ್ಟ್ ಮಾಡತಕ್ಕ ವ್ಯವಸ್ಥೆಯಿದೆ; ಕೆಲವರದ್ದು ಬಾಕಿ ನಿಂತಾಗ ಅವರು ಕೋರ್ಟಿಗೆ ಹೋಗುತ್ತಾರೆ. ಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬರುತ್ತಾರೆ. ಕೋರ್ಟಿನಿಂದ ಸ್ಟೇ ತೆಗೆದುಕೊಂಡು ಬಂದಾಗ ಏನು ಕ್ರಮ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಭಾಗ್ಯಜ್ಯೋತಿ ಯೋಜನೆಯಲ್ಲಿ ಬಡವರಿಗೆ ಆಗಿರತಕ್ಕ.....

(ಗೊಂದಲ)

ನೀವು ಕುಳಿತುಕೊಳ್ಳಿ. ನೀವು ಹೇಳುವಾಗ ನಾನು ಸುಮ್ಮನೇ ಇರಲಿಲ್ಲವೆ ? ನಾನೂ ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ರಮೇಶ್ ಬಿ. ಜಿಗಜಿಣಗಿ.—ಇದು ಬಹಳ ಅತಿಯಾಯಿತು.

(ಗೊಂದಲ)

ಶ್ರೀ ಲಕ್ಷ್ಮೀನರಸಿಂಹಯ್ಯ.—ನಿಮಗೇನಾ ಬಡವರ ಬಗ್ಗೆ ಕಳಕಳಿ ಇರತಕ್ಕದ್ದು ನಿಮ್ಮ ಜಮೀನಿನ ವಿಷಯವು ಒಂದು ದಿವಸ ಬರುತ್ತದೆ. ನನಗೆ ಗೊತ್ತಿದೆ. ನನಗೆ ಹತ್ತಿರ ಎಲ್ಲ ರೆಕಾರ್ಡ್‌ಗಳೂ ಇವೆ. ಸುಮ್ಮನೆ ಹೇಳಬೇಡಿ.

(ಗೊಂದಲ)

SRI MALLIKARJUNA M. KHARGE.—I am sorry if a Minister threatens a Member like this when he is doing his duty. He is a responsible Minister. He should withdraw it,, He should apologise. He should not threaten like that.

ಅಧ್ಯಕ್ಷರು.—ಥ್ರೆಟನ್ ಅವರೂ ಮಾಡುವುದು ಸರಿಯಲ್ಲ. ನೀವು ಮಾಡುವುದೂ ಸರಿಯಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪ್ರಶ್ನೆ ಕೇಳಿದರೆ ಹೆದರಿಸುತ್ತಾರೆ.....

ಅಧ್ಯಕ್ಷರು.—ಆ ರೀತಿ ಹೆದರಿಸುವುದು ಬೇಡ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಅಫಾಲಜಿ ಕೇಳಿಕೊಳ್ಳಬೇಕು. ಪ್ರಶ್ನೆ ಕೇಳಿದರೆ ನಿಮ್ಮ ಜಮೀನಿನದ್ದೂ ಬರುತ್ತದೆ ಅಂದರೆ ಏನರ್ಥ ? ಇಲ್ಲಿ ಪ್ರಶ್ನೆಯನ್ನೇ ಕೇಳಬಾರದಾ ?

ಅಧ್ಯಕ್ಷರು.—ಕಾನಡಿಯವರೂ ಸಹ ಅಪರಾಧ ಹೆದರಿಸಿದರು ಎಂದು ನನಗೆ ಅನ್ನಿಸುವುದಿಲ್ಲ. ಅವರು ಉದ್ವೇಗದಿಂದ ಕಾಗದವನ್ನು ಹರಿದು ಹಾಕಿದರು. ಇವರ ಮೇಲೆ ಅವರು ಉದ್ವೇಗ ಗೊಳ್ಳುವುದು ಬೇಡ. ಅವರ ಮೇಲೆ ಇವರು ಉದ್ವೇಶವಾಗುವುದು ಬೇಡ ಈ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ. ಮುಂದೆ ಉತ್ತರ ಕೊಡಿಸುತ್ತೇನೆ. ಎಲ್ಲರೂ ಕೂತ್ರಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪ್ರಶ್ನೆಯನ್ನು ಕೇಳುವಾಗ ನಿಮ್ಮ ಜಮೀನಿನ ವಿಷಯವೂ ಬರುತ್ತದೆ, ತಾಳಿ ತಾಳಿ ಅದನ್ನೂ ಹೇಳುತ್ತೇನೆ ಎಂದರೆ ಏನರ್ಥ ?

ಶ್ರೀ ಬಿ. ಲಕ್ಕಪ್ಪ.—ಹೇಳ್ರಿ, ಇದ್ದರೆ ಹೇಳಿ. ಪರಿಶುದ್ಧವಾಗಿ ಜೀವನ ಮಾಡತಕ್ಕಂತಹವನು

ಅಧ್ಯಕ್ಷರು.—ಅವರು ಥ್ರೆಟನ್ ಮಾಡಲಿಲ್ಲ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ರೀತಿ ಥ್ರೆಟನ್ ಮಾಡಿ ಹೆದರಿಸುತ್ತೀರಾ ? ನಮಗೂ ಗೊತ್ತಿದೆ ಯಾವ ರೀತಿ ಹೆದರಿಸಬೇಕು. ಅಂತ. It is not fair on your part. Don't threaten like that.

(ಗೊಂದಲ)

ಶ್ರೀ ಲಕ್ಷ್ಮೀನರಸಿಂಹಯ್ಯ.—ಖರ್ಗೆಯವರೇ, ತಾಪ್ರಗಳೆಲ್ಲರೂ ಕುಳಿತುಕೊಂಡರೆ ನಿಧಾನವಾಗಿ ಉತ್ತರ ಹೇಳುತ್ತೇನೆ. ನೀವು ಏನೇ ಕೇಳಿದರೂ ಅದಕ್ಕೆ ಉತ್ತರ ಹೇಳುವುದಕ್ಕೆ ತಯಾರಿದ್ದೇನೆ.

(ಗೊಂದಲ)

ಅದನ್ನು ಬಿಟ್ಟು ಈ ರೀತಿ ಮಾಡಿದರೆ ಹೇಗೆ. ಬಡವರ ಬಗ್ಗೆ ನಿಮಗೇ ಕನಿಕರ ಇರುವುದು. ನಮಗೆ ಏನೂ ಇಲ್ಲ ಅಂತ ತಿಳಿದುಕೊಂಡಿದ್ದೀರಾ ? ಹೇಳುತ್ತೇನೆ.

(ಗೊಂದಲ)

ಆಸ್ಮಕ್ಷರು.—ಕಾಗದ ಹರಿದಿದ್ದಾರೆ.....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕೊಶ್ಚನ್ ಅಂಡ್ ಆನ್ಸರ್ ಒಂದು ಕಡೆ ಇರಲಿ. ಇಲ್ಲಿ ಸದಸ್ಯರು ನಿರ್ಭೀತಿಯಿಂದ ಪ್ರಶ್ನೆಯನ್ನು ಕೇಳಬೇಕಾದರೆ ಪ್ರತಿಯೊಬ್ಬರಿಗೂ ಇದೆ ರೀತಿ ಥ್ರೆಟನ್ ಮಾಡುತ್ತಾರೆ. It is unfair. I condemn it. He should not threaten like that. ಆ ಶಬ್ದವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಾವು ಹೇಳಬೇಕು.

(ಗೊಂದಲ)

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಸನ್ಮಾನ್ಯ ಅಧ್ಯಕ್ಷರೆ, ತಾವು ಏನೇನು ಆದೇಶವನ್ನು ಕೊಟ್ಟಿದ್ದೀರೋ ಅದನ್ನು ಸರ್ಕಾರ ಪಾಲಿಸಕ್ಕೆ ತಯಾರಿದೆ. ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುವ ಕಾಲದಲ್ಲಿ ಸಂಪೂರ್ಣವಾಗಿ ಅವರ ಉತ್ತರ ಕೇಳಿದ ಮೇಲೆ ಮರು ಪ್ರಶ್ನೆಯನ್ನು ಹಾಕಲಿ. ಅದನ್ನು ಬಿಟ್ಟು ಅವರು ಉತ್ತರ ಕೊಡುತ್ತಾ ಇರತಕ್ಕ ಸಂದರ್ಭದಲ್ಲಿ ಉದ್ವೇಗಗೊಂಡು ಬಡವರು ಬಡವರು ಅಂತ ಹೇಳಿದಾಗ ಸಾಮಾನ್ಯವಾಗಿ ಅವರೂ ಸ್ವಲ್ಪ ಉದ್ವೇಗದಿಂದ ಆ ರೀತಿ ಆಡಿರಬಹುದು. ಆದರೆ ಪ್ರಶ್ನೆಗೆ ಉತ್ತರ ಕೊಡತಕ್ಕ ಸಂದರ್ಭದಲ್ಲಿ ಮಧ್ಯೆ ಮಧ್ಯೆ ಮಾತನಾಡಕ್ಕಂತಹದ್ದು ಸರಿಯೇ ? ಮಧ್ಯೆ ಮಧ್ಯೆ ಮಾತನಾಡುವುದೆನ್ನು ಬಿಡಲಿ. ಪೂರ್ಣ ಉತ್ತರಕೊಟ್ಟ ಮೇಲೆ ಹೇಳಲಿ, ಪ್ರಶ್ನೆಗೆ ಉತ್ತರ ಹೇಳುವ ಕಾಲಕ್ಕೆ ಮಧ್ಯೆ ಪ್ರವೇಶ ಮಾಡಿ ಮಾತನಾಡುವುದನ್ನು ದಯವಾಡಿ ಅವರು ಬಿಡಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಅವರು ಏನು ಕೇಳಿದರೂ ಅದಕ್ಕೆ ಉತ್ತರ ಕೊಡುವುದಕ್ಕೆ ನಾನು ತಯಾರು ಇದ್ದೇನೆ ಸುಮ್ಮನೆ ಕೂಗುವುದು ಅಲ್ಲ. ಅವರು ಬಡವರ ಬಗ್ಗೆ ಹೇಳಿದರು. ಬಡವರ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ, ನೀವು ಬಡವರ ಬಗ್ಗೆ ಹೇಗೆ ನಡೆದುಕೊಂಡಿದ್ದೀರಿ ಎಂದು ನಾವೂ ಕೇಳಬೇಕಾಗುತ್ತದೆ. ಬಡವರ ಬಗ್ಗೆ ತಾವು ವೈಯಕ್ತಿಕವಾಗಿಯೂ ಸಹ ಆಸಕ್ತಿಯನ್ನು ತೋರಿಸಬೇಕಾಗುತ್ತದೆ. ಬಡವರಿಗೆ ಸಿಗುವ ಜಮೀನನ್ನು ತೆಗೆದುಕೊಂಡು ಹೋಗಿಬಿಟ್ಟು ನೀವು ಅಲಾಟ್ ಮಾಡಿಸಿಕೊಂಡಿದ್ದೀರಿ. ಇದೆಲ್ಲಾ ಗೊತ್ತಿಲ್ಲಾ ಅಂದುಕೊಂಡ್ರಾ ಈ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇವೆ. ನಾನು ನಿಮ್ಮ ತರಾಗೆ ಕೂಗುವುದಕ್ಕೆ ಆಗುವುದಿಲ್ಲ. ಕಾರಣ ನನ್ನ ಗಂಟಲೆಲ್ಲಾ ಒಣಗಿ ಹೋಗಿದೆ. ಸುಮ್ಮನೆ ಮಾತನಾಡಿದರೆ ಆಗುವುದಿಲ್ಲ.

(ಗೊಂದಲ)

ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ನ ಮಯಲೇಟ್ ಮಾಡಿ ಅವರು ಅಲಾಟ್ ಮಾಡಿಸಿಕೊಂಡಿದ್ದಾರೆ.

(ಗೊಂದಲ)

(ಮಾನ್ಯ ಶ್ರೀ ಕೆ. ಲಕ್ಕಪ್ಪನವರು ಸದನದ ಬಳಿಾಂಗಣದ ಜಾಗಕ್ಕೆ ಬಂದರು)

(ಗೊಂದಲ)

ಶ್ರೀ ಲಕ್ಷ್ಮೀನರಸಿಂಹಯ್ಯ.—ನೋಡಿ ಸ್ವಾಮಿ, ನಾನು ಅನಾವಶ್ಯಕವಾಗಿ.....

(ಗೊಂದಲ)

ನೀವು ಹೇಳುವುದು ಗೊತ್ತಿದೆ ಸ್ವಾಮಿ. ಲ್ಯಾಂಡ್ ಗ್ರಾಂಟ್ ರೂಲ್ಸ್‌ವಯಲೇಟ್ ಮಾಡಿ ಜಮೀನನ್ನು ಅಲಾಟ್ ಮಾಡಿಸಿಕೊಂಡಿದ್ದೀರಿ. ನನ್ನ ಹತ್ತಿರ ರೆಕಾರ್ಡ್ಸ್ ಇದೆ. ಬಡವರಿಗೆ ಸಿಗತಕ್ಕ ಜಮೀನನ್ನು ನೀವು ಮಾಡಿಸಿಕೊಂಡಿದ್ದೀರಿ.

(ಗೊಂದಲ)

ಅಧ್ಯಕ್ಷರು.—ನಾನು ರೆಕಾರ್ಡ್ಸ್ ತರಿಸಿ ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬಾಯಿತಪ್ಪಿ ಹೇಳಿದರೋ ಹೇಗೆ ?

(ಗೊಂದಲ)

ಶ್ರೀ ಕೆ. ಲಕ್ಕಪ್ಪ.—(ಒಳಾಂಗಣದಿಂದ) ಇನ್ನು ಮೇಲೆ ನಾವು ಇವರ ಖಾತೆಯ ಬಗ್ಗೆ ಪ್ರಶ್ನೆ ಕೇಳುವ ಹಾಗೇ ಇಲ್ಲ.....ಇವರ ಇಲಾಖೆ ಬಗ್ಗೆ ಕೇಳುವ ಹಾಗೇ ಇಲ್ಲ,

ಅಧ್ಯಕ್ಷರು.—ನಾನು ರೆಕಾರ್ಡ್ಸ್ ತರಿಸಿ ನೋಡುತ್ತೇನೆ. ಎಕ್ಸ್‌ಪಂಜ್ ಮಾಡುವುದು ಇದ್ದರೆ ಮಾಡುತ್ತೇನೆ. ಅದು ಆಡಬಾರದ ಮಾತು ಎಂದಿದ್ದರೆ ನಾನು ತರಿಸಿನೋಡಿ ಎಕ್ಸ್‌ಪಂಜ್ ಮಾಡುತ್ತೇನೆ. ಗದ್ದಲದಲ್ಲಿ ಅವರು ಏನು ಹೇಳಿದರು ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀ ಬಿ. ಲಕ್ಕಪ್ಪ.—(ಒಳಾಂಗಣದಿಂದ) ಇದರಲ್ಲಿ ನನ್ನ ಮರ್ಯಾದೆ ಪ್ರಶ್ನೆ ಇದೆ.

ಅಧ್ಯಕ್ಷರು.—ತಾವು ಏನು ಮಾತನಾಡುವುದಿದ್ದರೂ ತಮ್ಮ ಜಾಗಕ್ಕೆ ಬಂದು ಮಾತನಾಡಿ. ಇದು ನಾಟಕದ ಸ್ಟೇಜ್ ಅಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮ ಆಸ್ತಿ ವಿಷಯ ನಮಗೂ ಗೊತ್ತಿದೆ, ಅದು ಒಂದು ದಿವಸ ಇಲ್ಲಿ ಬರುತ್ತದೆ ಎಂದು ಮಂತ್ರಿಗಳು ಹೇಳಿದರು. ಅದು ರೆಕಾರ್ಡ್‌ನಲ್ಲಿ ಇದೆ. ಈ ರೀತಿ ಮಾತನಾಡುವುದು ಸರಿಯಲ್ಲ. ಅವರು ನೇರ ಆಪಾದನೆ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ರೀತಿ ಇನ್ವೆಸ್ಟ್‌ಮೆಂಟ್ಸ್‌ಬಲ್ ಸ್ಟೇಟ್‌ಮೆಂಟ್ ಮಾಡುವುದು. ಥ್ರೆಟನ್ ಮಾಡುವುದು ಸಚಿವರಿಗೆ ಭೂಷಣವಲ್ಲ,

ಅಧ್ಯಕ್ಷರು.—ಗದ್ದಲದಲ್ಲಿ ಏನೇನು ಮಾತನಾಡಿದರೋ ಅದನ್ನು ತರಿಸಿನೋಡುತ್ತೇನೆ. ಅಕಸ್ಮಾತ್ ರೆಕಾರ್ಡ್‌ನಲ್ಲಿದ್ದರೆ ಏನು ಮಾಡಬೇಕೋ ಮಾಡುತ್ತೇನೆ. ನಾನು ಈ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ. ಈ ಕಡೆ ೨೮ ಜನ, ಆ ಕಡೆ ೨೮ ಜನ ಈ ಸಭೆಯ ಘನತೆಗೆ ಧಕ್ಕೆ ಬರುವ ಹಾಗೆ ಮಾತನಾಡಿದ್ದೀರಿ. ಆ ಮಾತು ಇತ್ತೆಂದರೆ ನಾನು ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಎಕ್ಸ್‌ಪಂಜ್ ಪ್ರಶ್ನೆ ಅಲ್ಲ, ಅವರು ಆ ಮಾತನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು.

ಅಧ್ಯಕ್ಷರು.—ಹಾಗೆ ಅವರು ಹೇಳಿದ್ದರೆ ವಿತ್‌ಡ್ರಾ ಮಾಡಿಸೋಣ. ಇದಕ್ಕೆ ಮೊದಲು ಅವರು ಏನು ಹೇಳಿದ್ದಾರೆಂದು ನೋಡಬೇಕಲ್ಲವೇ ? ೫ ನಿಮಿಷ ಇರಿ.

ಶ್ರೀ ಎಂ. ರಾಮಪ್ಪ.—ನಿಮ್ಮ ಅಧ್ಯಕ್ಷತೆಯಲ್ಲಿ ನಾವು.....

ಅಧ್ಯಕ್ಷರು.—ಎರಡೂ ಕಡೆ ಹತ್ತತ್ತು ಜನ ಒಟ್ಟಿಗೆ ಮಾತನಾಡಿದ್ದೀರಿ. ಯಾರ ಮಾತನ್ನು ನಾನು ಕೇಳುವುದು ? ಒಬ್ಬೊಬ್ಬರೇ ಮಾಡಿನಾಡಿದರೆ ನನಗೂ ಕೇಳಿಸುತ್ತದೆ. ಹಾಗೂ ಇಲ್ಲಿ ರೆಕಾರ್ಡ್ ಕೂಡಾ ಸರಿಯಾಗಿ ಆಗುತ್ತದೆ; ಅವರು ಹೇಳಿದ ಮಾತು ಖರ್ಗೆಯವರಿಗೆ ಹೇಳಿಲ್ಲ; ನಮಗೂ ಕೇಳಿಲ್ಲಾ ಅದು ಒಬ್ಬಿಬ್ಬರಿಗೆ ಕೇಳಿರಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಅವರು ಅಂದದ್ದು ನಿಜ. It is afact. ಮಂತ್ರಿಗಳು ಹೇಳಿದರು, ಅದನ್ನು ಏತಕ್ಕೆ ಹೇಳಿದರು ?

ಶ್ರೀ ಯು. ಭೂಪತಿ.—ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಕ್ಲಿಯರ್ ಆಗಿ ಅಲಿಗೇಷನ್ ಮಾಡಿದ್ದಾರೆ. ಬಹಳ ಕ್ಲಿಯರ್ ಆಗಿ ಲಕ್ಕಪ್ಪನವರು ಲ್ಯಾಂಡ್ ಗ್ರಾಂಟ್ ರೂಲ್ಸ್‌ನ್ನು ವಾಯಲೇಟ್

ಮಾಡಿ ಲ್ಯಾಂಡ್ ಹೊಡೆದಿದ್ದಾರೆಂದು ಅವರು ಹೇಳಿದ್ದಾರೆ. He said very clearly. Let him move the Motion. you cannot threaten the Member like that being a Minister.

ಶ್ರೀ ಆರ್. ವೆಂಕಟರಾಮಯ್ಯ.—ಬಡವರ ಬಗ್ಗೆ ಕಾಳಜಿ ಇದೆಯೆಂದು ಹೇಳಿದ್ದರೆ ಸರಿ. ನಿಮ್ಮ ಜವೀನಿನ ಬಗ್ಗೆ ನನಗೂ ಗೊತ್ರಿ ಎಂದು ಹೇಳಬೇಕಾಗಿಲ್ಲ, ಅದು ಸರಿಯಲ್ಲ. It was not warranted. He should not have threaten like that. It amounts to threat.

SRI U. BHUPATHY.—If you have got records, move a Motion againat him.

(Interruptions)

ಶ್ರೀ ಯು. ಭೂಪತಿ.—ರೆಕಾರ್ಡ್‌ಗೆ ಹೋಗಿದ್ದರೆ ಮಾತ್ರ ತರಿಸಿ ನೋಡುತ್ತೇನೆ ಎಂದು ಹೇಳುವುದಲ್ಲ, If it true, let him move the motion, against the Member. He should not go back on his words.

(Interruptions)

SRI U. BHUPATHY.—If he is going to stand by what he said, let him move the Motion.

SRI LAKSHMINARASIMHAIAH.—I am going to stand by it.

SRI U. BHUPATHY.—Then move Motion. Do not make allegations.

SRI M. MALLIKARJUN KHARGE.—He says that he would stand by it.

SRI R. VENKATARAMAIAH.—It will be a very bad precedent.

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೆ, ನಾನು ರೆಕಾರ್ಡ್ ತರಿಸಿ ನೋಡುತ್ತೇನೆ. ಅವರು ಆಡಬಾರದ ಮಾತು ಆಡಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

SRI M. MALLIKAJUN KHARGE.—He said that he will prove it. Let us see.

ಶ್ರೀ ಆರ್. ಎನ್. ನಾಯಕ್.—ಮೊದಲು ಮಂತ್ರಿಗಳು ಕ್ಷಮೆ ಕೇಳಿ ಆಮೇಲೆ ಉತ್ತರ ಕೊಡಲಿ.

SRI U. BHUPATHY.—If he is going to stand by it, let him move a Motion. You said you are going to stand by it. You move a Motion.

ಅಧ್ಯಕ್ಷರು.—ಮಾನ್ಯ ಲಕ್ಷ್ಮೀನರಸಿಂಹಯ್ಯನವರೇ, ಅವರಿಗೆ ಅಪಮಾನವಾಗುವ ರೀತಿಯಲ್ಲಿ ನೀವು ಮಾತನಾಡಿದ್ದೀರಿ ಎಂದು ಹೇಳುತ್ತಾರೆ, ಅದಕ್ಕೆ ನೀವು ಏನು ಹೇಳುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೆ,...

ಶ್ರೀ ಯು. ಭೂಪತಿ.—ಅವರನ್ನು ಕೇಳುವ ಪ್ರಶ್ನೆಯೇ ಇಲ್ಲ, I am going to stand by it ಎಂದು ಹೇಳಿದ್ದಾರೆ. Then move a Motion. Do not make allegations.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ರೀತಿಯಾಗಿ ಫೈಟನ್ ಮಾಡಿದರೆ ಹೇಗೆ ?

ಅಧ್ಯಕ್ಷರು.—ಅವರು ಏನು ಹೇಳಿದ್ದಾರೆಂಬುದನ್ನು ರೆಕಾರ್ಡ್ ತರಿಸಿ ನೋಡುತ್ತೇನೆ. I am going to stand by it ಅಂದರೆ ಏನು ಏಂಬುದನ್ನು ನಾನು ನೋಡುತ್ತೇನೆ. ನಾನು ರೆಕಾರ್ಡ್ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಲಕ್ಕಪ್ಪನವರ ಮೇಲೆ ಸೀರಿಯಸ್ ಅಲಿಗೇಷನ್ ಮಾಡಿದ್ದಾರೆ

ಶ್ರೀ ಯು. ಭೂಪತಿ.—ಗಲಾಟೆ ಮಧ್ಯದಲ್ಲಿ ಅದು ರೆಕಾರ್ಡ್‌ಗೆ ಹೋಗದೇ ಇರಬಹುದು, ಅವರು ಮಾಡಿದ ಅಲಿಗೇಷನ್ ಮಾತನ್ನು ನಾವು ಕ್ಲಿಯರ್ ಆಗಿ ಕೇಳಿಕೊಂಡಿದ್ದೇವೆ. ಈ ತರಹ ಅಪಾದನೆ ಮಾಡಿದರೆ ಜನಗಳು ಏನು ತಿಳಿದುಕೊಳ್ಳುತ್ತಾರೆ. ದಯವಿಟ್ಟು ಮೋಷನ್ ಮೂವ್ ಮಾಡಬೇಕು. ಹೀಗಾದರೆ ನಾವು ಅವರು ಸುಳ್ಳು ಹೇಳುತ್ತಾರೆಂದು ಹೇಳಬೇಕಾಗುತ್ತದೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನನ್ನ ಹತ್ತಿರ ರೆಕಾರ್ಡ್ಸ್ ಇದೆ, ಅದನ್ನು ಸಭಾಧ್ಯಕ್ಷರಿಗೆ ಕಳುಹಿಸಿ ಕೊಡುತ್ತೇನೆ. ಅವರಿಗೆ ಕ್ರಮ ತೆಗೆದುಕೊಳ್ಳಲಿಕ್ಕೆ ಸಂಪೂರ್ಣ ಹಕ್ಕು ಇದೆ. ಅವರು ಕ್ರಮ ತೆಗೆದುಕೊಳ್ಳಲಿ.

ಶ್ರೀ ಬಿ. ಲಕ್ಕಪ್ಪ.—ಅವರು ಹೇಳುವುದರಲ್ಲಿ ಯಾವುದೇ ತಿರುಳೂ ಇಲ್ಲ. ಇದು ನನ್ನ ಗೌರವದ ಪ್ರಶ್ನೆ.

ಅಧ್ಯಕ್ಷರು.—ಅವರು ಏನು ಹೇಳಿದ್ದಾರೆನ್ನುವುದನ್ನು ನಾನು ತರಿಸಿ ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಮಾನ್ಯ ಸದಸ್ಯರೊಬ್ಬರ ಗೌರವದ ಪ್ರಶ್ನೆ. ಅವರಿಗೆ ಫೈಟನ್ ಮಾಡಿದ್ದಾರೆ. ಅವರ ಮೇಲೆ ಸೀರಿಯಸ್ ಚಾರ್ಜ್‌ಸ್ ಮಾಡಿದ ಮೇಲೆ ಲಿಕ್ವಿಡೇಟ್ ಮಾಡುತ್ತಾರೆಂದು ಹೇಳಬಹುದು,

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗಾಗಲೇ ಕೋಟ್ಯಾಂತರ ರೂಪಾಯಿ ಮಾಡಿದ್ದಾರೆ. ಅದನ್ನೂ ಬೇಕಾದರೆ ಸಬ್‌ಸ್ಟೆನ್ಷಿಯೇಟ್ ಮಾಡಲಿ. ನಾನು ಲಿಕ್ವಿಡೇಟ್ ಮಾಡುತ್ತೇನೆ ಎಂದು ಹೇಳಬಹುದು.

SRI U. BHUPATHY.—see one more allegation he is making.

(Interruptions)

ಅಧ್ಯಕ್ಷರು.—ಇರಿ ಶ್ರೀ ಕೃಷ್ಣಾರೆಡ್ಡಿಯವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಎಂ. ಕೆ. ಕೃಷ್ಣಾರೆಡ್ಡಿ.—ಎಕ್ಸ್‌ಪಂಜ್ ಮಾಡಿಸುತ್ತೇನೆ ಎಂದು ತಾವು ಹೇಳಿದ್ದೀರಿ. ಮತ್ತೆ ಅವರು ಫ್ವಿಕ್‌ಅನ್ ಆಗಿದ್ದರೆ ಎಂಬ ಭಾವನೆ ಇದೆ. ಕಡತ ತರಿಸಿದಮೇಲೆ ತಾವು ಅದರ ಬಗ್ಗೆ ಎಕ್ಸ್‌ಪಂಜ್ ಮಾಡಿಸಬಹುದು ಅಥವಾ ಮಾನ್ಯ ಮಂತ್ರಿಗಳು ಬೇರೆ ರೀತಿಯಿಂದ ಯಾವ ಉದ್ದೇಶದಿಂದ ಮಾತನಾಡಿದ್ದೇನೆ ಎಂದು ವಿವರಣೆ ಕೊಡಬಹುದು. ಅದಕ್ಕೆ ಅವಕಾಶ ಮಾಡಿಕೊಟ್ಟರೆ ಸಾಕಾಗುತ್ತದೆ. ತಾವು ಕಡತ ತರಿಸಿ ನೋಡಿ.

(ಗೊಂದಲ)

ಶ್ರೀ ಯು. ಭೂಪತಿ.—ಆಲ್ಲಿಯವರೆಗೂ ಸಭೆಯನ್ನು ಮುಂದೂಡಿ.

ಅಧ್ಯಕ್ಷರು.—ಶ್ರೀ ಖರ್ಗೆಯವರೇ, ನಾನು ರೆಕಾರ್ಡ್ ತರಿಸಿ ನೋಡುತ್ತೇನೆ ಎಂದು ಹೇಳಿದೆ. ಈಗ ಅವರು ಏನು ಅಂದರೋ ಅದು ನನಗೆ ಗೊತ್ತಿಲ್ಲ. ಅದನ್ನು ಕಡತ ತರಿಸಿ ನೋಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಮತ್ತೆ ಮತ್ತೆ ಹೇಳಿದ್ದಾರೆ. ತಾವು ಎಷ್ಟು ಜಮೀನು ಮಾಡಿದ್ದೀರಿ ಎಂದು ಗೊತ್ತು, ಕೋಟ್ಯಾಂತರ ರೂಪಾಯಿ ಮಾಡಿದ್ದೀರಿ ಎಂದು ಹೇಳಿದ್ದಾರೆ. He is repeating and says that he will prove it.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಪ್ರಶ್ನೆ ಇಷ್ಟೆ...

ಅಧ್ಯಕ್ಷರು.—ರೆಕಾರ್ಡ್ಸ್ ಬರಲಿ ತಾಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಸದಸ್ಯರು ಅನೇಕ ಸಲ ಪ್ರಶ್ನೆಗಳನ್ನು ಕೇಳುತ್ತಾರೆ. ಅನೇಕ ಡಿಪಾರ್ಟ್‌ಮೆಂಟ್‌ಗಳ ಬಗ್ಗೆ ಡಿಪಾರ್ಟ್‌ಮೆಂಟಲ್ ಕ್ಯಾಪ್ಸನ್ಸ್ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾರೆ. ಅನೇಕ ಸಲ ಪವರ್ಸ್ ಮಿಸ್‌ಯೂಸ್ ಮಾಡುತ್ತಾರೆ, ರೂಲ್ಸ್ ವಯಲೇಟ್ ಮಾಡುತ್ತಾರೆ. ಅದನ್ನು ಈ ಸದನದಲ್ಲಿ ತಂದು ನ್ಯಾಯ ದೊರಕಿಸಿಕೊಡತಕ್ಕದ್ದು, ಸರ್ಕಾರದ ಬೊಕ್ಕಸಕ್ಕೆ ಏನಾದರೂ ಲುಕ್ಸಾನು ಆಗುತ್ತದೆ ಎಂದರೆ ಎತ್ತಿತೋರಿಸಿ ಅದನ್ನು ಸರಿಪಡಿಸಬೇಕು ಎಂದು ಪೇಳತಕ್ಕದ್ದು ಸದಸ್ಯರ ಕರ್ತವ್ಯ. ಇದನ್ನು ಅವರು ಮಾಡುವಾಗ, ಬೇರೆ ಪರ್ಸನಲ್ ಅಲಿಗೇಷನ್ ಏನೂ ಅವರು ಮಾಡಲಿಲ್ಲ. ಅಥವಾ ನಿಮ್ಮ ಬಗ್ಗೆ ಭಾಲೆಂಜ್ ಮಾಡಿಲ್ಲ. ಆದರೂ ಇದ್ದಕ್ಕಿದ್ದಂತೆ ಎದ್ದು ನೀವು ಬಡವರ ಬಗ್ಗೆ ಎಷ್ಟು ಮಾತನಾಡುತ್ತೀರಿ ಎಂದು ಗೊತ್ತು. ಯಾವ ರೀತಿ ರೂಲ್ಸ್ ವಯಲೇಟ್ ಮಾಡಿ ಜಮೀನು ಮಾಡಿಕೊಂಡಿದ್ದೀರಿ. ಅದನ್ನು ಒಂದು ದಿವಸ ಸಭೆಯ ಮುಂದೆ ತರುತ್ತೇನೆ ಎಂದು ಹೀಗೆ ಹೆದರಿಸಿ ನಮ್ಮ ಬಾಯಿ ಮುಚ್ಚಿಸಬೇಕು, ಈ ಸದನದಲ್ಲಿ ಯಾರಾದರೂ ಸದಸ್ಯರು ಹಾಗೆ ಮಾತನಾಡಿದರೆ ಈ ರೀತಿ ಬೆದರಿಕೆ ಹಾಕಿ ಕೂಡಿಸಬೇಕೆಂದು ಹೇಳಿದರೆ ಅದು ಯಾರಿಂದಲೂ ಸಾಧ್ಯವಾಗುವುದಿಲ್ಲ.

(ಗೊಂದಲ)

ಶ್ರೀ ಯು. ಭೂಪತಿ.—ಅಧ್ಯಕ್ಷರೇ, ನಾನು ಹೇಳುವುದನ್ನು ಕೇಳಿ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಈಗ ಶ್ರೀ ಖರ್ಗೆಯವರು ಹೇಳಿದ್ದಾರೆ. ಅದಕ್ಕೆ ಏನು ಉತ್ತರ ಹೇಳುತ್ತಾರೋ ಕೇಳೋಣ. ಆಮೇಲೆ ನೀವೂ ಹೇಳುವಿರಂತೆ. ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ಯು. ಭೂಪತಿ.—ಯಾವ ಪ್ರಶ್ನೆ ಕೇಳಿದ್ದಕ್ಕೆ ಉತ್ತರವನ್ನು ಯಾರು ಹೇಳಬೇಕು ?

ಅಧ್ಯಕ್ಷರು.—ಅವರ ಭಾಲೆಂಜ್‌ಗೆ ಇವರು ಉತ್ತರ ಕೊಡಬೇಕೋ ಬೇಡವೋ ? ನೀವು ಹೇಳಿರಿ.

ಶ್ರೀ ಯು. ಭೂಪತಿ,—ಶ್ರೀ ಖರ್ಗೆಯವರು ಪ್ರಶ್ನೆ ಕೇಳಿದ್ದಾರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಭಾಗ್ಯಜ್ಯೋತಿಯಲ್ಲಿ ವಿದ್ಯುತ್ ಸರಬರಾಜನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದೀರಿ, ಅವರು ಕೇವಲ ಬಡವರು. ಆವರ ಬಗ್ಗೆ ನೀವು ವಿಚಾರ ಮಾಡುತ್ತಿಲ್ಲ. ಕೋಟ್ಯಾಂತರ ರೂಪಾಯಿ ಬಾಕಿ ಇರತಕ್ಕಂಥವರಿಗೆ ಡಿಸ್‌ಕನೆಕ್ಟ್ ಮಾಡುತ್ತಿಲ್ಲ ಎಂದು ಹೇಳಿದರು. ಅದಕ್ಕೆ ನಾನು ಕಾನೂನು ಪ್ರಕಾರ ಏನೇನು ಮಾಡಬೇಕೋ ಅದನ್ನು ಮಾಡುತ್ತೇವೆ ಎಂದು ಹೇಳಿದೆ. ''ನಿಮಗೆ ನಾಚಿಕೆಯಾಗುವುದಿಲ್ಲವೇ? ನೀವು ಅಂಥವರು, ಇಂಥವರು ಎಂದು ಅವಾಚ್ಯ ಶಬ್ದಗಳಿಂದ ಶ್ರೀ ಕಾನಡೆಯವರು ಮತ್ತು ಶ್ರೀ ಲಕ್ಕಪ್ಪನವರು ಮಾತನಾಡುವುದಕ್ಕೆ ಹೋದರು. ಆವಾಗ ನಾನು ನಿಮ್ಮ ಬಡವರ ಕಳಕಳಿ ನಮಗೆ ಗೊತ್ತಿದೆ, ಬಡವರಿಗೆ ಸಿಗಬೇಕಾದ ಜಮೀನನ್ನು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನ್ನು ವಯಲೇಟ್ ಮಾಡಿ ಅಲಾಟ್ ಮಾಡಿಸಿಕೊಂಡಿದ್ದೀರಿ. ನಮಗೆ ಗೊತ್ತಿದೆ'' ಎಂದು ಹೇಳಿದ್ದು ನಿಜ. ಇದನ್ನು ಬೇಕಾದರೆ ಬೇರೆ ಯಾವುದಾದರೂ ರೂಪದಲ್ಲಿ ಬೇರೆ ಸಮಯದಲ್ಲಿ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ

೧೦-೦೦ ಎ. ಎಂ.

ನನ್ನ ಹತ್ತಿರ ರೆಕಾರ್ಡ್ಸ್ ಇವೆ, ತಮಗೆ ಕಳುಹಿಸುತ್ತೇನೆ. ಇದು ಸರಿ ಎಂದು ಕಂಡುಬಂದರೆ ಏನ ಬೇಕಾದರೂ ಮಾಡಿ, ಸುಳ್ಳು ಆದರೆ ನಾನು ಕ್ಷಮೆ ಕೇಳುತ್ತೇನೆ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ...

ಅಧ್ಯಕ್ಷರು.—ಈಗ ಮಾನ್ಯ ಲಕ್ಕಪ್ಪನವರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ತಾವು ದಯವಿಟ್ಟು ನಿಮ್ಮ ಜಾಗಕ್ಕೆ ಹೋಗಿ. ಭೂಪತಿಯವರೇ ತಾವು ಈ...

ಶ್ರೀ ಯು. ಭೂಪತಿ.—ತಾವು ರೆಕಾರ್ಡ್ಸ್ ತರಿಸಿ ನೋಡುತ್ತೇನೆಂದು ಹೇಳಿದಿರಿ. ಆದರೆ ಇಲ್ಲಿ ಪ್ರಾರಂಭದಲ್ಲಿ ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ. ನೀವು ಭೂಮಿ ಹೇಗೆ ಹೊಡೆದಿದ್ದೀರಿ ಎನ್ನುವುದು ಗೊತ್ತು ಎಂದು ಹೇಳಿದರು. ಆ ರೀತಿ ಹೇಳಿದ ಮೇಲೆ ಏನಾಯಿತು ? ಇಲ್ಲಿ ರೆಕಾರ್ಡ್ ಬರೆಯುವವರು ಕಿವಿ ಮುಚ್ಚಿಕೊಂಡು ಕುಳಿತಿರುತ್ತಾರೆ. ಮೈಕ್ ಮುಖಾಂತರ ಕೇಳಿದ್ದು ಮಾತ್ರ ಅವರಿಗೆ ಕೇಳುತ್ತದೆ. ನಾವು ಇಲ್ಲಿ ಕಿವಿ ಮುಚ್ಚಿಕೊಂಡು ಕುಳಿತಿಲ್ಲ. ಕಿವಿ ತೆರೆದುಕೊಂಡು ಕುಳಿತಿದ್ದೇವೆ. ಅವರು ಮೈಕ್ ಇಲ್ಲದೇ ಮಾತನಾಡಿದರೂ ಕೂಡ ನನ್ನ ಕಿವಿಗೆ ಕೇಳುತ್ತದೆ. ಇಲ್ಲಿ ಆರೋಪ ಪ್ರತ್ಯಾರೋಪ ಬಂತು. ನೀವು ಕೋಟ್ಯಾಂತರ ರೂಪಾಯಿ ಹೊಡೆದಿದ್ದೀರಿ, ಹೊಲಸು ಜೀವನ ಮಾಡಿದ್ದೀರೆಂದು ಹೇಳಿದರು. ಈ ತರಹ ಮಾತನಾಡಿದರೆ, ನೀವು ರೆಕಾರ್ಡ್ಸ್ ತರಿಸಿ ನೋಡುತ್ತೇನೆ ಎಂದು ಹೇಳುತ್ತೀರಿ. ರೆಕಾರ್ಡ್ ತರಿಸಿ, ನೋಡಿದರೆ, ಇಲ್ಲಿ ರೆಕಾರ್ಡ್ ಆಗಿಲ್ಲ, ಗಲಾಟೆಯಲ್ಲಿ ಮಾತನಾಡಿದ್ದಾರೆ, ಇದರಲ್ಲಿ ಏನೂ ಇಲ್ಲ ಎಂದು ಹೇಳುತ್ತೀರಿ. ಆದರೆ ನಮ್ಮ ಕಿವಿಯಲ್ಲಿ ಹೋಗಿರುವುದನ್ನು ಯಾರು ತೆಗೆಯುತ್ತಾರೆ. ಆದ್ದರಿಂದ ದಯವಿಟ್ಟು ತಾವು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಪ್ರಶ್ನೋತ್ತರ ವೇಳೆಯಲ್ಲಿ ಉತ್ತರ ಕೊಡುವಾಗ, ನೀವು ಟ್ರಜರಿ ಬೆಂಚ್‌ನಲ್ಲಿರತಕ್ಕವರು, ವಿರೋಧಪಕ್ಷದವರು ಅಲಿಗೇಷನ್ ಮಾಡಿದರೆ, ವೈಯುಕ್ತಿಕವಾಗಿ ಅಟ್ಯಾಕ್ ಮಾಡುವುದು ಬೇಡ. ಏನಾದರೂ ಇದ್ದರೆ ನೀವು ಮೋಷನ್ ತೆಗೆದುಕೊಂಡು ಬನ್ನಿ. You move a motion against the member. You have got every right to do it. You said you are going to stand by it. You bring a Motion against the Member. ಅದು ಬಿಟ್ಟು ಮಂತ್ರಿಯಾಗಿದ್ದೇನೆಂದು ಹೇಳಿ, ನೀವು ಏನೆಂದು ನಮಗೆ ಗೊತ್ತು ಎಂಬ ಬೆದರಿಕೆ ಹಾಕುವುದು ಸರಿಯಲ್ಲ.

(ಗೊಂದಲ)

ಶ್ರೀ ಲಕ್ಷ್ಮೀನರಸಿಂಹಯ್ಯ.—ಅನುಭವದ ಮೇಲೆ ಬರುತ್ತದೆ...

ಅಧ್ಯಕ್ಷರು.—ಈಗ ರೆಕಾರ್ಡ್ ತರಿಸಿದ್ದೇನೆ, ಓದಿ ಹೇಳುತ್ತೇನೆ. ಮಾನ್ಯ ಕೆ.ಹೆಚ್. ಪಾಟೀಲರು, ಸೀನಿಯರ್ ಮೆಂಬರುಗಳು, ಎಲ್ಲರೂ ಕೇಳಿ.

(ಗೊಂದಲ)

''ಶ್ರೀ ಲಕ್ಷ್ಮೀನರಸಿಂಹಯ್ಯ ನಿಮಗೆ ಬಡವರ ಬಗ್ಗೆ ಇರತಕ್ಕ ಕಳಕಳಿ ಏನು ಎಂಬುದು ನನಗೆ ಗೊತ್ತಿದೆ, ನಿಮ್ಮ ಜಮೀನಿನ ವಿಷಯವೂ ಒಂದು ದಿವಸ ಬರುತ್ತದೆ, ನನ್ನ ಹತ್ತಿರ ಎಲ್ಲಾ ರೆಕಾರ್ಡ್ಸ್ ಇದೆ.'' ಇಷ್ಟು ಮಾತ್ರ ಅಂದಿದ್ದಾರೆ. ಶ್ರೀ ಕೆ. ಹೆಚ್. ಪಾಟೀಲರು, ಗೋವಿಂದೇಗೌಡರು, ತಾವು ಳ ಮಂದಿ ಕುಳಿತು ಈ ಬಗ್ಗೆ ಏನು ಮಾಡಬೇಕೆಂದು ಹೇಳುತ್ತೀರೋ, ಆ ಪ್ರಕಾರ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ರಕ್ಷಣೆ ಕೊಡತಕ್ಕವರು ತಾವು. ಒಬ್ಬ ಸದಸ್ಯರು ಪ್ರಶ್ನೆ ಹಾಕಿದ ನೋಲೆ ಅವರಿಗೆ ಫ್ಯಾಟ್ಸ್ ಮಾಡಬೇಕೋ ಅಥವಾ ಉತ್ತರ ಕೊಡಬೇಕೋ ಇಷ್ಟು ಮಾತ್ರ ತಾವು ಹೇಳಿ. ನೀವು ಇವರಿಗೆ ಪೆನರಿಸುವುದು ಸರಿ ಎಂದು ಹೇಳಿದರೆ...

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ತಡೀಯಿರಿ, ವಿಶ್ವನಾಥ ರೆಡ್ಡಿ ಮುದ್ನಾಳ್ ಅವರೇ ತಾವು ಹೇಳಿ. ನಿಮ್ಮ ಅಭಿಪ್ರಾಯವನ್ನೂ ಕೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಓದಿದ್ದೀರಿ, ಪ್ರತ್ಯಾರೋಪ ಬಂದಿದೆ. ನಮಗೂ ಕಾಳಜಿ ಇದೆಯೆಂದು ಹೇಳಿದ್ದರೆ ಸಾಕಾಗಿತ್ತು. ಅವರ ಮೇಲೆ ಏಕೆ ಆರೋಪ ಮಾಡಬೇಕಾಗಿತ್ತು.

ಅಧ್ಯಕ್ಷರು.—ವೆಂಕಟರಾಮಯ್ಯನವರೇ ಸ್ವಲ್ಪ ಕೇಳಿ, ತಾವು ಕೂಡಿ. ತಮ್ಮ ಅಭಿಪ್ರಾಯವನ್ನೂ ಕೇಳುತ್ತೇನೆ.

(ಗೊಂದಲ)

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಸನ್ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕಾದರೂ ಅನ್ನದ ಕೊಡಿ.

(ಗೊಂದಲ)

ಅಧ್ಯಕ್ಷರು.—ವೆಂಕಟರಾಮಯ್ಯನವರೂ ಹೇಳಲಿ. ಬಂಗಾರಪ್ಪನವರೂ ಹೇಳಲಿ. ಕೆಲವು ಸೀನಿಯರ್ ಮೆಂಬರ್ಸ್‌ನ್ನು ಕೇಳಿ ನಂತರ ನಾನು ರೂಲಿಂಗ್ ಕೊಡುತ್ತೇನೆ. ಮಾನ್ಯ ಖರ್ಗೆಯವರು ಈಗಾಗಲೇ ಹೇಳಿದ್ದಾರೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಸನ್ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕಿಂತ ಮೊದಲು ತಮ್ಮ ಹತ್ತಿರ ವಿನಂತಿಮಾಡಿಕೊಳ್ಳುತ್ತೇನೆ. ತಾವು ಯಾರಿಗೆ ಅಪ್ಪಣೆ ಕೊಡುತ್ತೀರಿ ಅವರು ಮಾತ್ರ ಮಾತನಾಡಬೇಕು. ತಾವು ಅನ್ನತಕ್ಕ ಶಬ್ದವನ್ನು ನಾನು ಉಪಯೋಗಿಸುವುದಿಲ್ಲ. ಇಲ್ಲ ಮಾತೇ ಕೇಳಿಬರುವುದಿಲ್ಲ. ಸದನದಲ್ಲಿ ಏನು ನಡೆಯುತ್ತಿದೆ ಎನ್ನುವುದೇ ಕೆಲವುಸಲ ತಿಳಿದು ಬರುವುದಿಲ್ಲ. ಇಲ್ಲಿ ಆದಂಥ ವಾಸ್ತವಿಕ ಸ್ಥಿತಿ ಏನೆಂದರೆ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದರು ಅವರು ಸಂಪೂರ್ಣವಾದಂಥ ಉತ್ತರವನ್ನು ಕೊಟ್ಟಮೇಲೆ ಅವರು ಬೇಕಾದಂಥ ಮಾತನ್ನು ಆಡಲಿ. ಆದರೆ ಅವರು ಉತ್ತರ ಕೊಡುತ್ತಾ ಇರುವಾಗ ಮಧ್ಯೆ ಪ್ರವೇಶ ಮಾಡಿ ಇದು ಬಡವರ ವಿಚಾರ, ಇದರ ಬಗ್ಗೆ ಕಾಳಜಿ ಇಲ್ಲ ಎಂಬ ಮಾತನ್ನು ಹೇಳಿದರು. ಇದರ ಅವಶ್ಯಕತೆ ಇತ್ತೇ ? ಸಂಪೂರ್ಣವಾಗಿ ಉತ್ತರ ಕೊಟ್ಟಮೇಲೆ ಬೇಕಾದರೆ ಬಡವರಿಗೆ ಅನ್ಯಾಯ ಮಾಡುತ್ತಿದ್ದೀರಿ ಎಂದು ಹೇಳಲಿ. ಆದರೆ ಮಧ್ಯದಲ್ಲೇ ವಿಷಯವನ್ನು ಬಿಟ್ಟು, ತಮಗೆ ಬಡವರ ಬಗ್ಗೆ ಎಷ್ಟು ಕಳಕಳಿ ಇದೆ ಎಂಬು ಗೊತ್ತು ಇತ್ಯಾದಿ ಮಾತನ್ನು ಹೇಳಿದ್ದಾರೆ. ಅವರು ಮಧ್ಯಪ್ರವೇಶ ಮಾಡಿದ್ದು ತಪ್ಪು. ಸಚಿವರೂ ಸಹ ಅದಕ್ಕೆ ಪ್ರತಿಕ್ರಿಯೆಯಾಗಿ ಉಗ್ರವಾಗಿ ಹೇಳಿದ್ದು ಸರಿಯಲ್ಲ. ಆದುದರಿಂದ ಇವೆರಡನ್ನೂ ಕಡತದಿಂದ ತೆಗೆದುಹಾಕಿಬಿಡಿ. ಮಾನ್ಯ ವಿರೋಧಪಕ್ಷದ ಸದಸ್ಯರಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ ಏನೆಂದರೆ, ಸಚಿವರು ಉತ್ತರ ಹೇಳುವಾಗ ಅದನ್ನು ಪೂರ್ವವಾಗಿ ಕೇಳುವ ಸ್ಥೈರ್ಯ ಅವರ ಹತ್ತಿರ ಇರಬೇಕು. ಈ ರೀತಿ ಮಧ್ಯೆ ಎದ್ದುನಿಂತು ಗಡಿಬಿಡಿ ಮಾಡಿದರೆ ನಮ್ಮಂಥವರು ಮಾತನಾಡುವುದಕ್ಕೇ ಆಗುವುದಿಲ್ಲ. ಈ ರೀತಿ ಮಧ್ಯೆ ಎದ್ದುನಿಂತು ಮಾತನಾಡಬಾರದು ಎಂಬ ಹೊಸ ಪರಿಪಾಠವನ್ನು ತಾವು ಹಾಕಿ ಕೊಡಬೇಕು ಎಂಬ ಮಾತನ್ನು ಹೇಳಿ, ಇವೆರಡನ್ನೂ ಕಡತದಿಂದ ತೆಗೆದು ಹಾಕಬೇಕೆಂದು ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ. ನಿಜವಾಗಿಯೂ ಕೂಡಾ ಲಕ್ಕಪ್ಪನವರು ನಾಚಿಕೆಗೇಡು, ನಿಮಗೆ ಬಡವರ ಬಗ್ಗೆ ಕಾಳಜಿ ಇಲ್ಲ ಎಂಬ ಮಾತನ್ನು ಹೇಳಿದರು, ಸಚಿವರೂ ಕೂಡಾ ನಿಮಗೇನು ಕಾಳಜಿ ಇರುವುದು ಗೊತ್ತು ಎಂದು ಒಂದು ಮಾತನ್ನು ಹೇಳಿದರು. ನಿಮ್ಮ ವಿಷಯ ನನಗೆ ಗೊತ್ತಿಲ್ಲವೇ ? ನಿಮ್ಮ ಜಮೀನು ವಿಷಯ ನಾನು ತೆಗೆಯುತ್ತೇನೆ ಎಂದು ಹೇಳಿದರು.

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ''ನಿಮ್ಮ ಜಮೀನು ವಿಷಯ ಒಂದು ದಿವಸ ಬರುತ್ತದೆ ನನ್ನ ಹತ್ತಿ ಎಲ್ಲಾ ರೆಕಾರ್ಡ್ಸ್ ಇದೆ'' ಎಂದು ಹೇಳಿದ್ದಾರೆ. ಇದಕ್ಕೆ ಏನು ಮಾಡಬೇಕು ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ,—ಅದನ್ನು ಕಡತದಿಂದ ತೆಗೆದುಹಾಕಿ. ಇಬ್ಬರ ಬಗ್ಗೆಯೂ ಎನ್‌ಕ್ವೈರಿಯೂ ಬೇಡ. ಈಗ ಶುರುವಾಗಿ ಇದೊಂದು ಅಟ್ರಿಮೋನಿ ನಡೆಯುತ್ತಾ ಹೋಗುತ್ತದೆ. ಇದನ್ನು ಕ್ಲೋಸ್ ಮಾಡಿಬಿಡಿ. ಕಮಿಟಿನೂ ಬೇಡ, ಎನ್‌ಕ್ವೈರಿನೂ ಬೇಡ. ಎಕ್ಸ್‌ಪಂಜ್ ಮಾಡಿಬಿಡಿ.

ಅಧ್ಯಕ್ಷರು.—ಬಂಗಾರಪ್ಪನವರೇ, ನೀವು ಏನು ಹೇಳುತ್ತೀರಿ ಹೇಳಿ. ಗುರುಪ್ರಸಾದ್ ಅವರೇ ಕುಳಿತುಕೊಳ್ಳಿ. ಆಮೇಲೆ ನಿಮ್ಮ ವಿಚಾರ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸಚಿವರು ಏನೋ ಮಾತನಾಡುತ್ತಾರಂತೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾನು ಯಾವ ಸಂದರ್ಭದಲ್ಲಿ ಅವರ ಬಗ್ಗೆ ಹೇಳಬೇಕಾಯಿತು ಎಂಬುದು ಇಡೀ ಸಭೆಗೇ ಗೊತ್ತಿದೆ. ನಾನು ಇನ್ನೂ ಉತ್ತರ ಹೇಳುವಾಗ ಮಧ್ಯದಲ್ಲೇ ಅವರು, ನಿಮಗೆ ನಾಚಿಕೆ ಇಲ್ಲ ಎಂದು ಹೇಳಿದ್ದಾರೆ. ಮೊದಲಿನಿಂದಲೂ ಇದರ ಬಗ್ಗೆ ಮಾನವಿ ಮಾಡುತ್ತಿದ್ದೇನೆ,

ಆದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದರು. ಕ್ರಮ ತೆಗೆದುಕೊಂಡು ಏನು ಮಾಡಬೇಕೋ ಆದನ್ನು ಮಾಡುತ್ತಿದ್ದೇವೆ. ಬಡಪರ ಹತ್ತಿರ ೫೦೦ ರೂಪಾಯಿ ಬಾಕಿ ಇದ್ದರೂ ಹತ್ತು ರೂಪಾಯಿ ಮಾತ್ರ ಕಲೆಕ್ಟ್ ಮಾಡಿ ರಿಕನೆಷನ್ ಮಾಡಿ ಎಂದು ಹೇಳಿದ್ದೇವೆ. ಇದಕ್ಕೂ ದುಡ್ಡು ಕೊಡಬೇಕಾಗುತ್ತದೆ. ಪುಕ್ಕಟೆ ಅಲ್ಲ ಎಂಬ ಪ್ರವೃತ್ತಿ ಅವರಲ್ಲಿ ಬಳೆಯಲಿ ಎಂದು ಎಷ್ಟೋ ಬಾಕಿ ಇದ್ದರೂ ಹತ್ತು ರೂಪಾಯಿ ಮಾತ್ರ ತೆಗೆದುಕೊಂಡು ಭಾಗ್ಯಜ್ಯೋತಿ ಸ್ಕೀಮ್‌ನಲ್ಲಿ ರಿಕನೆಕ್ಷನ್ ಮಾಡಬೇಕು ಎಂದು ನಿರ್ಣಯ ತೆಗೆದುಕೊಂಡು ಆ ರೀತಿ ಕ್ರಮ ತೆಗೆದುಕೊಂಡಿದ್ದೇವೆ. ಆದರೂ ಕೂಡಾ ಕೇವಲ ವಿರೋಧ ಮಾಡುವ ಒಂದೇ ಒಂದು ದೃಷ್ಟಿಯಿಂದ ಬಡಪರ ಬಗ್ಗೆ ನಿಮಗೆ ಕಳಕಳಿ ಇಲ್ಲ ಎಂದು ಇನ್ನೂ ಬಹಳ ತೀವ್ರತರವಾದ ಆಪಾದನೆ ಮಾಡಿದಕ್ಕೂಸ್ಕರ, ನಾನು ನಿಮಗಿರತಕ್ಕಂಥ ಕಳಕಳಿ ನನಗೆ ಗೊತ್ತಿದೆ ಎನ್ನುವ ಸಂದರ್ಭದಲ್ಲಿ ನನಗೆ ವೈಯಕ್ತಿಕವಾಗಿ ಗೊತ್ತಿದ್ದಂಥ ವಿಷಯವನ್ನು ಪ್ರಸ್ತಾಪ ಮಾಡಿದೆ. ಈ ಸಂದರ್ಭದಲ್ಲಿ ಅದನ್ನು ಮಾಡಿದ್ದು ಸರಿಯಲ್ಲ ಎಂದು ಇವರೆಲ್ಲಾ ಮಾತನಾಡಿದ ಮೇಲೆ ನನಗೆ ಅರ್ಥ ವಾಗಿದೆ. ಈ ಸಂದರ್ಭದಲ್ಲಿ ಅದನ್ನು ಪ್ರಸ್ತಾಪ ಮಾಡಿದ್ದು ಸರಿಯಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ಆ ರೀತಿ ಹೇಳಿದ್ದು ಸರಿಯಲ್ಲ ಎಂದು ಹೇಳಿದ್ದಾರೆ, ಈ ಶಬ್ದ ಏನಿದೆ ಅದನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ. ಲಕ್ಕಪ್ಪನವರೇ ನೀವು ನಿಮ್ಮ ಸ್ಥಾನಕ್ಕೆ ಹೋಗಿ. ನಾನು ಈ ಶಬ್ದಗಳನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ, ನಾನು ಆ ವಿಚಾರಕ್ಕೆ ಹೋಗುವುದಿಲ್ಲ ಬೇರೆ ವಿಚಾರ ಹೇಳುತ್ತೇನೆ,

ಅಧ್ಯಕ್ಷರು.—ಈ ವಿಚಾರ ಮುಕ್ತಾಯವಾಗಿದೆ. ಇದನ್ನು ಅಂದರೆ ಈ ಪ್ರಶ್ನೆಯನ್ನು ನಾನು ತಡೆಹಿಡಿದಿದ್ದೇನೆ. ಬಂಗಾರಪ್ಪನವರೇ, ಈಗ ನಾನು ಆ ಶಬ್ದಗಳನ್ನು ಎಕ್ಸ್‌ಪಂಜ್ ಮಾಡಿರುತ್ತೇನೆ. ಮಾನ್ಯ ಕೆ. ಹೆಚ್. ಪಾಟೀಲರನ್ನು ಕರೆದಿದ್ದೇನೆ. ಈ ಕೊಶ್ಚನ್ ಏನಿದೆ ಇದನ್ನು ಹೆಲ್ಡ್ ಓವರ್ ಮಾಡಿರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಲಕ್ಕಪ್ಪನವರೂ ಒಂದು ಮಾತನ್ನು ಹೇಳಿಬಿಡಲಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ನನಗೆ ನೇರವಾಗಿ ಮಂತ್ರಿಗಳ ಬಗ್ಗೆ ವೈಯಕ್ತಿಕ ವಾದ ಟೀಕೆ ಮಾಡಬೇಕೆನ್ನುವ ಉದ್ದೇಶವೇನೂ ಇರಲಿಲ್ಲ. ಕೆಲವರು ಲಕ್ಷಾಂತರ ರೂಪಾಯಿಗಳ ಬಾಕಿ ಇಟುಕೊಂಡಿದ್ದಾರೆ, ಅವರ ಹೆಸರುಗಳನ್ನು ನೀವು ಹೇಳಲಿಲ್ಲ. ಅವರ ಹೆಸರನ್ನು ಪಟ್ಟಿಯಿಂದ ಕೈ ಬಿಟ್ಟಿದ್ದೀರಿ, ಆದರೆ ಜನತಾ ಮನೆಗಳಲ್ಲಿರುವವರು ಬಡಪರು, ಅವರು ೫ ರೂಪಾಯಿ ಅಥವಾ ೧೦ ರೂಪಾಯಿ ಬಾಕಿ ಇದ್ದರೆ ಅವರ ಮನೆಗಳಲ್ಲಿ ಡಿಸ್‌ಕನೆಕ್ಟ್ ಮಾಡುತ್ತೀರಿ ಎಂದು ಹೇಳಿದೆ. ನಾನು ಅವರ ವೈಯಕ್ತಿಕ ವಿಷಯವೇನೂ ಹೇಳಲಿಲ್ಲ. ಅವರ ಆಸ್ತಿ ಎಷ್ಟಿದೆ ಎಂದು ಹೇಳಲಿಲ್ಲ. ಆ ರೀತಿ ಹೇಳಬೇಕೆನ್ನುವುದು ನನ್ನ ಮನಸ್ಸಿನಲ್ಲಿಯೂ ಸಹ ಇರಲಿಲ್ಲ. ಆದರೆ ನನ್ನ ಬಗ್ಗೆ ಅವರು ಹೇಳಿದ್ದು ಸರಿಯಲ್ಲ. ನನ್ನ ಆಸ್ತಿ ಏನಿದೆ ಅದರ ಖಾತೆ, ಪಹಣಿ, ಆರ್ ಆರ್ ಐ ಎಲ್ಲವನ್ನೂ ತಂದು ತಮಗೆ ಕೊಡುತ್ತೇನೆ. ತಾವೇ ಪರಿಶೀಲನೆ ಮಾಡಿ ಅವು ಸರಿಯಾಗಿಲ್ಲದೆ ರೂಲ್ಸ್‌ನ್ನು ವಯೋಲೇಶನ್ ಮಾಡಿದ್ದರೆ ಆಗ ನನ್ನ ಈ ಸದಸ್ಯತ್ವದಿಂದಲೇ ವಜಾ ಮಾಡಿ, ನಾನು ಅದನ್ನು ಸ್ವೀಕಾರ ಮಾಡುತ್ತೇನೆ. ಅದು ಬಿಟ್ಟು ಮಾನ್ಯ ಮಂತ್ರಿಗಳು ಪ್ರಶ್ನೆಗಳಿಗೆ ಉತ್ತರ ಹೇಳುವಾಗ ನನ್ನ ವೈಯಕ್ತಿಕ ವಿಷಯ ಇಲ್ಲಿ ತಂದು ಹೇಳಬಾರದು. ಆ ರೀತಿ ಹೇಳಿದರೆ ಸದಸ್ಯರ ಮನಸ್ಸಿಗೆ ನೋವಾಗುತ್ತದೆ. ದಯವಾಡಿ ಇನ್ನು ಮುಂದೆ ಆ ರೀತಿ ಮಾಡಬಾರದು ಎಂದು ನಾನು ಕೇಳಿ ಕೊಳ್ಳುತ್ತೇನೆ.

MR. SPEAKER.—This matter is closed.

SRI U. BHUPATHY.—Why do you close it? What is this? He can refer the matter to the Lok Ayukta.

(INTERRUPTIONS)

MR. SPEAKER.—The matter is closed. The question is held over.

SRI VISHWANATH REDDY MUDNAL.—Speaker's ruling cannot be questioned.

ಶ್ರೀ ಎಸ್. ಬಂಗಾರಪ್ಪ.—ಆದರೆ ವೈಯುಕ್ತಿಕ ವಿಚಾರ ಬಂತು. ಅದನ್ನು ತಾವು ಕ್ಲೋಜ್ ಮಾಡಿದಿರಿ. ಆದರೆ ಪ್ರಶ್ನೆಯನ್ನು ಏನು ಮಾಡಿದಿರಿ.

ಅಧ್ಯಕ್ಷರು.—ಆ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ. ವಿವರವಾದ ಉತ್ತರ ಕೊಡಲಿ. ಈಗ ಬೇರೆ ಪ್ರಶ್ನೆಗೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಯಾವಾಗ ಬರುತ್ತದೆಂದು ಹೇಳಿ.

ಅಧ್ಯಕ್ಷರು.—ನೆಕ್ಸ್ಟ ವೀಕ್ ಬರಬಹುದು.

ಶ್ರೀ ಎಸ್. ಬಂಗಾರಪ್ಪ.—ಬರಬಹುದು ಅಂದರೆ ಹೇಗೆ ? ಯಾವಾಗ ಉತ್ತರ ಕೊಡಿಸುತ್ತೀರೆಂದು ಖಚಿತವಾಗಿ ಹೇಳಿ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳೇ, ಯಾವಾಗ ಸಂಪೂರ್ಣವಾದ ಉತ್ತರ ತರಿಸಿಕೊಡುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ನಿಮಗೆ ಸಂಪೂರ್ಣ ಮಾಹಿತಿ ಇರುವ ಕಾಪಿ ತರಿಸಿ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಬುಧವಾರ ಇಟ್ಟು ಕೊಳ್ಳೋಣ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆಗಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ಭಾಗ್ಯಜ್ಯೋತಿ ಯೋಜನೆಯಲ್ಲಿ ಕರೆಂಟ್ ಡಿಸ್‌ಕನೆಕ್ಟ್ ಮಾಡಿದ್ದಾರೆ, ಅವರಿಗೆ ಕನೆಕ್ಷನ್ ಕೊಡಿ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಮಾನ್ಯ ಕೆ. ಎಚ್. ಪಾಟೀಲ್‌ರವರೇ ತಾವು ಪ್ರಶ್ನೆ ಕೇಳಿ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಂತ್ರಣವು ಅನುಭವಿಸಿದ ಲಾಭ ಮತ್ತು ನಷ್ಟ ಕುರಿತು

೧೫೨ (೪೦೪) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ದೊಡ್ಡ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ಅನುಭವಿಸಿದ ಲಾಭ ಮತ್ತು ನಷ್ಟವೆಷ್ಟು. ಎಲ್ಲ ಅನುಭವಿ ಅಧಿಕಾರಿಗಳನ್ನು ಈ ಕಾರ್ಖಾನೆಯಿಂದ ಹೊರಹಾಕಲಾಗಿದೆ ಎಂಬುದು ನಿಜವೇ, ಆದುದರಿಂದಾಗಿ ಕಾರ್ಖಾನೆಗೆ ಅತೀವ ನಷ್ಟ ಸಂಭವಿಸಿದೆ ಎಂಬುದು ನಿಜವೆ ?

ಶ್ರೀ ಸಿ. ವೀರಣ್ಣ (ಕೈಗಾರಿಕೆ ಮತ್ತು ಸಣ್ಣ ಉಳಿತಾಯ ಸಚಿವರು).—

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು ಕಳೆದ ಮೂರು ವರ್ಷಗಳಲ್ಲಿ ಅನುಭವಿಸಿದ ನಷ್ಟದ ವಿವರ ಈ ಕೆಳಗಿನಂತಿದೆ.